ವಿವರ.	ಗೆ.	ದರ.	ಮೊತ್ತಾವ ಪರಿಮಾಣ.
ಮಟ್ಟೀಕೋದಿ	ಸಲೆಗಜ		635
ಕಾಡುಕಲ್ಲು ಮಂಣಿನಿಂದ ಪಾಯಾಭರ್ತಿ	ಡಿಟೋ		635
ಸುಟ್ಟಯಿಟ್ಟಿಗೆ ಮಂಣು	ಸಲೆಅಡಿ		33393
ಸುಟ್ಟಯಿಟ್ಟಿಗೆ ಸುಂಣ	ಡಿಟೋ		2497
ಕಲ್ಲುಜಪ್ಪಡಿ	ಚದರ ಅಡಿ		4001
ಕದಗಳು ಮತ್ತು ಕಿಟಕಿಗಳು	ಡಿಟೋ		1340
ಯಿಟ್ಟಿಗೆ ಗಾರೆ ಪಡಿಚಟ್ಟು	ಲಾಂಬಿ ಅಡಿ		1573
ಸುಂಣದ ಸಂದುಗಾರೆ	ಚದರ		6·40
ಟೂರುಹಾಕುವದು	ಡಿಟೋ		29·95
ಹೊನ್ನೇ ಮರದಕೆಲಸ	ಸಲೆಅಡಿ		456
ಹೊನ್ನೇ ಮರದ ರೀಪೀಸ್‌ಪಟ್ಟಿ, ಮಂಗಳೂರು ಅವ್ವಲ್ ಕ್ವಾಲಿನ ಹೆಂಚು, ಮಳೆ ಬಗೈರೇ ಕಂಪ್ಲೀಟಿನಿಂದ ಮೇಲ್ ಛಾವಣಿ	ಚದರ		114·46
ಸೂರ್‌ಪಟ್ಟಿ	ಲಾಂಬಿಅಡಿ		79
ಫಿನಿಯಲ್ ಯಾನೆ ಸೂರಪಟ್ಟಿ ಮಧ್ಯದ ಗಾಳಿ ಕಂಬಿ ..	ಅವದು		2
ಪೆಳ್ಳಕು ಹೆಂಜು	ಡಿಟೋ		80
ಸುಂಣದ ವರಟು ಗಿಲಾವು	ಚದರ		215·81
ಮಂಣಿನಗಿಲಾವು	ಡಿಟೋ		334·80
ಗ್ರಾವಲ್‌ನಿಂದ ನೆಲಘಟ್ಟನೆ	ಸಲೆಗಜ		119
ಸುಂಣ ತೊಡೆಯುವದು	ಚದರ		334·80
ಬಂಣ ಹಾಕುವದು	ಡಿಟೋ		215·81
ನೆಲಸರಿಮಾಡಿ ಗ್ರಾವಲ್‌ಹಾಕಿ ರೋಡ್ ತಯಾರ್ಮಾಡುವದಕ್ಕೆ ಪೊತ್ತ ರೂಪಾಯಿಗಳು	.. ..		..

ವಿ. ಪೋಟ್, ಕರ್ಯ,
ಯಗ್ಜಿಕ್ಯೂಟಿವ್ ಯಿಂಜನಿಯರ್,
ಮೈಸೂರು ಡಿವಿಜ್ಞಿ.

ತಾರೀಖು 15ನೇ ಆಗಸ್ಟ್ 1889.

ವಜ್ರದ ಹತ್ತ ಕಡೆಕು ಪಲಾಕೆಲಾಂಬಿ ಆರ್ಧ ಅಂಗುಲ ರುಂದಿ ಸುಮಾರು ಹಾಗೂ ಬ್ಯಾಳಿ ಅಂಗುಲ, ಸುಮಾರು ಬಾದಾಮಿ ಮಾಟ, ಚಿನ್ನದಲ್ಲಿ ಕಟ್ಟಿದೆ, ಚಿನ್ನದ ತಿರುಪು ಸಹವುಳ್ಳ ಸದರೀ ಹತ್ತ ಕಡಕು ಸ್ಯ 1889ನೇ ಇಸವಿ ಆಗಸ್ಟು 11ನೇ ಹಗಲು ಸುಮಾರು 1 ಘಂಟೇ ಹೊತ್ತಿನಲ್ಲಿ ನಂಜಿನಗೂಡು ವೂರಿಗೆ ಪೂತ್ತರ ದಿಕ್ಕಿನಲ್ಲಿರುವ ಸ್ನಾನಘಟ್ಟದ ಬಳಿ ಬಿದ್ದು ಹೋಯಿತು ಈ ಮೂಲ ಯತಾರಿಗಾದರೂ ಸಿಕ್ಕಿ ಇದರ ಅಡಿ ರುಜು ಮಾಡಿರುವ ದ್ವಿತೀಯ ಅಸಿಸ್ಟೆಂಟ್ ಕಮ್ಮಿಷನರ್ ಶ್ರೀನಿವಾಸಯ್ಯಂಗಾರ್ಯರಿಗಾಗಲಿ ಸರಕಾರಕ್ಕಾಗಲಿ ತಂದುಕೊಟ್ಟಲ್ಲಿ 50 ರೂಪಾಯಿ ಇನಾಮು ಕೊಡಲ್ಪಡುತ್ತದೆ. ಹತ್ತ ಕಡಕಿನ ಬೆಲೆ ಸುಮಾರ್ 200 ರೂಪಾಯಿ.

ಎ. ಶ್ರೀನಿವಾಸಯ್ಯಂಗಾರ್,
ದ್ವಿತೀಯ ಅಸಿಸ್ಟೆಂಟ್ ಕಮ್ಮಿಷನರ್.

ನೋಟಿಫಿಕೇಷನ್.-

ತಾರೀಖು 27ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಅನುಪಯೋಗಕರವಾದ್ದೆಂದು ನಿಶ್ಚಯಿಸಲ್ಪಟ್ಟಿರುವ ಒಂದು ಕಂಭವುಳ್ಳ ಡೇರಾ ಬಂದು ಮತ್ತು ರೌಟೀಯೂ ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ಷೇತ್ರವೇಟರ್ ಸಾಹೆಬರವರ ಆಫಿಸ್ ಬಳಿ. ಸ್ಯ 1889ನೇ ಇಸವಿ ನವಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಸಿ. ನಾರಾಯಣರಾವ್,
ಅಸಿಸ್ಟೆಂಟ್ ಕ್ಷೇತ್ರವೇಟರ್ ಆಫ್ ಫಾರೆಸ್ಟ್ಸ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖೆ.

ತಾರೀಖು 16ನೇ ಸೆಪ್ಟಂಬರ್ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ಕಾಣಿಸಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟಾ ವಗೈರೆ ಸಾಮ್ರ ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಆಕ್ಟೋಬರ್ ತಾರೀಖು 1ರ ವರಿಗೆ ಟೆಂಡರ್‌ಗಳು ಅಂಗೀಕರಿಸಲ್ಪಡುತ್ತದೆ.

ಡಿಪೋ ಹೆಸರು.		ಡಿಪೋ ಹೆಸರು.	
1	ಶಿವಮೊಗ್ಗ	5	ಬಿಟ್ಟಮನೆ ಸಮುದ್ರಹಳ್ಳಿ ಟಿಂಕಬೆರಿ
2	ಆಯನೂರು	6	ತೀರ್ಥಪುರ
3	ಚನ್ನಗಿರಿ	7	ಶಿರಳಕೊಪ್ಪ
4	ಉಬ್ರಾಣಿ		

2. ಟೆಂಡರ್‌ಗಳು ಯಿಂಥಾ ಡಿಪೋಗಳಿಗೆ ನಾಟಾ ವಗೈರೆ ಜವಾಯಿಸತಕ್ಕ ಬ್ರ್ಯೆ ಟೆಂಡರುಯಂದು ಲಿಫಾಫೆಗಳ ಮೇಲೆ ಬರೆದು ಯಿರತಕ್ಕದ್ದು.

3. ಪ್ರತಿ ಒಂದು ಡಿಪೋಕ್ಕೆ ಯಷ್ಟುನಾಟಾ ವಗೈರೆ ಜವಾಯಿಸಬೇಕೆಂಬ ತಪಶೀಲ್ ಮತ್ತು ಯಾವ ಜಂಗಲಿಯಿಂದ ನಾಟು ಕತರಾಯಿಸಬೇಕು ಯಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ತಪಶೀಲ್‌ಗಳನ್ನು ಅಂದರೆ ಮುಚ್ಚಳಿಕೇ ಷರತ್ತುಗಳು ವಗೈರೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕಂಜರ್ವೇಟರ್ ಸಾಹೆಬರವರ ಆಫಿಸಿನಲ್ಲಿ ನೋಟಿಸ್ ತಟ್ಟೇವೇಲೆ ನೋಡಿ ತಿಳದುಕೊಳ್ಳತಕ್ಕದ್ದು. ಅಲ್ಲಿ ಯಲ್ಲ ಸಂಗತಿಗಳೂ ತಿಳಿಸಲ್ಪಡುವದು.

4. ಟೆಂಡರುಗಳು ಸಮೇತ (100) ಒಂದು ನೂರು ರೂಪಾಯಿಗಳನ್ನು ನಗದಾಗಲಿ ಕರೆನ್ಸೀನೋಟ್ ಮೂಲಕವಾಗಿ ಆಗಲಿ ಠೇವಣಿ ಹಾಜರ್ ಮಾಡಬೇಕು, ಠೇವಣೀ ಪೊಬಲಗು ಯಿಲ್ಲದೆ ಬರುವ ದರಖಾಸ್ತುಗಳನ್ನ ಅಂಗೀಕರಿಸಲ್ಪಡುವದಿಲ್ಲವು, ಟೆಂಡರ್ ಅಂಗೀಕರಿಸದೆ ತಿರಸ್ಕರಿಸಲ್ಪಟ್ಟರೆ ಠೇವಣೀ ಪೊಬಲಗು ವಾಪಸ್ ಮಾಡಲಾಗೀತು.

5. ಪ್ರತಿ ದರಖಾಸ್ತುದಾರನೂ ನಾಟಾ ಯಾ ಬೆಲಗು ಜವಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಮತ್ತು ಬಿದರುಗಳ ಜವಾಯಿಸುವದಕ್ಕೆ ಕೇಕಡಾ 1ಕ್ಕೆ ದರ ನಮೂದಿಸಬೇಕು.

6. ಯಾವ ಟೆಂಡರನ್ನಾಗಲಿ ಕಾರಣವನ್ನು ತೋರಿಸದೆ ತಿರಸ್ಕರಿಸಲಿಕ್ಕೆ ಫಾರೆಸ್ಟ್ ಅಸಿಸ್ಟೆಂಟ್ ಕಂಜರ್ವೇಟರ್ ಸಾಹೆಬರವರು ಸ್ವತಂತ್ರರಾಗಿರುತ್ತಾರೆ.

7. ಕಟಾವಾಗತಕ್ಕ ಯಲ್ಲ ಮರಗಳೂ ಕಂಟ್ರಾಕ್ಟುದಾರನಿಗೆ ತಿಳುವಳಿಕೆ ಕೊಟ್ಟು ಫಾರೆಸ್ಟ್ ಇಲಾಖೆಯವರಿಂದ ನಿರ್ಮಾಣ ಮಾಡಲ್ಪಡುವದು.

8. ಬಡ್ಡಿಯಲ್ಲಿ 4 ಅಡಿ ವಳಗೆ ಸುತ್ತ ಅಡಿವುಳ್ಳ ಯಲ್ಲ ಮರಗಳನ್ನೂ ನೆಲಕ್ಕೆ ಮಟ್ಟವಾಗಿ ಕಾಪ್ಸಿಂಗ್ ರೂಲ್ಸ್ ಪ್ರಕಾರ ಕಡದು ಕಾಪ್ಸಿಂಗ್ ಮಾಡತಕ್ಕದ್ದು.

9. ಕೆತ್ತತಕ್ಕಂಥಾ ಯಲ್ಲ ನಾಟಾಗಳನ್ನೂ ಸರಿಯಾಗಿ ಕೆತ್ತಿ ಡಿಸಂಬರ್ ಆಖೈರ್ ವಳಗಾಗಿ ನಂಬರಿ ಹಾಕಲ್ಪಟ್ಟು ಅಳತೆ ಮಾಡುವದಕ್ಕೆ ಆಗುವಂತೆ ಯಲ್ಲ ಚವುಬೀನೆಯನ್ನೂ ಶಿದ್ಧಪಡಿಸಿ ಯಿರತಕ್ಕದ್ದು. ಡಿಸಂಬರ್ ಆಖೈರ್ ವಳಗಾಗಿ ಮಾಪಣೀ ಪಟ್ಟಿಗಳು ಫಾರೆಸ್ಟ್ ಆಫಿಸಿಗೆ ಬಂದು ಕೀರತಕ್ಕದ್ದು, ಈ ಮಾಪಣೀ ಪಟ್ಟಿಗಳೂ ಎಂದನಂತರ ಡಿಪೋಕ್ಕೆ ರವಾನೆ ಬ್ರ್ಯೆ ವ್ಯಾಸ್‌ಪೋರ್ಟು ಕೊಡಲ್ಪಡುತ್ತೆ, ಅದರ ಮುಂಚಿತವಾಗಿ ಕೊಡಲ್ಪಡುವದಿಲ್ಲ.

10. ಕಂಟ್ರಾಕ್ಟು ಮೆಂಜಾದ ತಾರೀಖು ಲಾಗಾಯತು ಒಂದು ವಾರದ ವಳಗಾಗಿ ನ್ಯಾಯವಾದ ಸ್ಟ್ಯಾಂಪು ಕಾಗದದ ಮೇಲೆ ಮುಚ್ಚಳಿಕೆ ಖರೆದುಕೊಡದೆ ತಪ್ಪಿದ ಪಕ್ಷದಲ್ಲಿ ಠೇವಣೀ ಪೊಬಲಗು ಸರ್ಕಾರಕ್ಕೆ ಸೇರಿಸಲ್ಪಡುತ್ತದೆ.

11. ಯಲ್ಲ ನಾಟುಗಳೂ ಮಾರ್ಚಿ ತಾರೀಖು 31ರ ವಳಗಾಗಿ ಡಿಪೋಕ್ಕೆ ರವಾನಿಸಬೇಕು, ಇದಕ್ಕೆ ತಪ್ಪಿದರೆ ಮುಚ್ಚಳಿಕೇ ಷರತ್ತುಗಳಂತೆ ಕ್ರಮ ಜರಿಗಿಸಲ್ಪಡುವದು.

12. ಚಾಬೀನೆಯನ್ನ ರಕ್ಷ್ಣ ಮಾಡುವದಕ್ಕೆ ಕಂಟ್ರಾಕ್ಟುದಾರನು ತನ್ನ ಸ್ವಂತ ಯೇರ್ಪಾಡು ಮಾಡಿಕೊಳ್ಳತಕ್ಕದ್ದು, ಮತ್ತು ಜಂಗಲೀ ವಳಗೆ ಭಂಡೀದಾರಿ ವಗೈರೆ ಮಾಡುವದಕ್ಕೆ ತಕ್ಕ ಸಹಾಯವನ್ನ ಕೊಡುವ ಫಾರೆಸ್ಟ್ ಇಲಾಖೆಯವರು ಬದ್ಧರಾಗಿರತಕ್ಕದ್ದಲ್ಲವು, ಮತ್ತು ಚವುಬೀನೆಯನ್ನ ರಕ್ಷ್ಣ ಮಾಡದೆ ಯಿದ್ದದ್ದಕ್ಕೆ ಯಾವ ನಿವನವೂ ಅಂಗೀಕರಿಸದೆ ಮುಚ್ಚಳಿಕೆಯ ಷರತ್ತಿನಂತೆ ಕ್ರಮ ಜರಿಗಿಸಲ್ಪಡುವದು.

ತಾರೀಖು 12ನೇ ಸಪ್ಟಂಬರ್ 1889.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವದೇನಂದರೆ, ರೇಲ್ವೆ ಕಂಟ್ರಾಕ್ಟುದಾರ ಕೈಕೋಬಾದ ಸಾಹೆಬರ ಕಡೆ ಉಮ್ಮಣ್ಣನೆಂಬುವನು ಚನ್ನಗಿರೀ ಡಿಪೋದಲ್ಲಿ 1 ಸಾಗವಾನೀ ಬೆಲಗನ್ನು ಕೊಂಡು ಕೊಂಡು 1 ವರುಸವೂ 9 ತಿಂಗಳಾದಾಗ್ಯೂ ರಕ್ಷ್ಣ ಮಾಡದೇ ಇರುವದ್ದರಿಂದ ಸದರೀ ಉಮ್ಮಣ್ಣನೆಂಬುವವನೇ ಆಗಲಿ ಅವನ ಕಡೆಯವರೇ ಆಗಲಿ ತಮ್ಮ ಹಕ್ಕನ್ನು ಸ್ಥಿರಪಡಿಸಿ ಸರಕಾರಕ್ಕೆ ಸಲ್ಲತಕ್ಕ ಬಾಡಿಗೆ ಪಾವತಿಯಿಂದ ಸದರೀ ಬೆಲಗವನ್ನು ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ರಕ್ಷ್ಣ ಮಾಡಿಕೊಳ್ಳಬೇಕು, ಇದಕ್ಕೆ ತಪ್ಪಿದರೆ ಸದರೀ ಬೆಲಗು ಹರಾಜು ಮಾಡಲ್ಪಡುತ್ತದೆ.

ಇ. ಪಿ. ಲೌರಿ,
ಅಸಿಸ್ಟೆಂಟ್ ಕಂಜರ್ವೇಟರ್.